**ಸಾಕ್ಷಿಯನ್ನು ದಿನಾಂಕ 19.7.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 12 ನೇ ಪ್ರತಿವಾದಿ ಪರ ಶ್ರೀ ಕೆ.ಎಸ್.ಎಲ್ ವಕೀಲರಿಂದಃ**

2000 ರಿಂದ ಈ ದಾವೆ ಸಲ್ಲಿಸುವವರೆಗೆ ನೀವು ದಾವಆಸ್ತಿಯಲ್ಲಿ ಏಕೆ ವ್ಯವಸಾಯ ಮಾಡಿರಲಿಲ್ಲ ಎಂದರೆ ಸಾಕ್ಷಿದಾರರು ನನ್ನ ತಂದೆಗೆ ಅನಾರೋಗ್ಯವಿದ್ದುದರಿಂದ ಹಾಗೂ ವೈಯಕ್ತಿಕ ಕಾರಣದಿಂದ ವ್ಯವಸಾಯ ಮಾಡಿರುವುದಿಲ್ಲ ಎನ್ನುವರು. ನನ್ನ ತಂದೆಗೆ ನಿಪಿ8 ರಂತೆ ದಾವಆಸ್ತಿಯ ಭೌತಿಕ ಸ್ವಾಧೀನ ಬಾರದಿದ್ದರಿಂದ ನನ್ನ ತಂದೆ ದಾವಆಸ್ತಿಯಲ್ಲಿ ವ್ಯವಸಾಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯು 2 ನೇ ಪ್ರತಿವಾದಿಗೆ ಮೌಖಿಕವಾಗಿ ಯಾರ ಸಮಕ್ಷಮ ಬೋಗ್ಯಕ್ಕೆ ನೀಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ದಾವಆಸ್ತಿಯ ಮಾಲೀಕನಲ್ಲದ ಕಾರಣ ಸದರಿ ಆಸ್ತಿಯನ್ನು 2 ನೇ ಪ್ರತಿವಾದಿಗೆ ಬೋಗ್ಯಕ್ಕೆ ನೀಡಿರುವುದಿಲ್ಲ, ಈ ದಾವೆಗೆ ವ್ಯಾಜ್ಯ ಕಾರಣ ಸೃಷ್ಟಿ ಮಾಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ9 ಮತ್ತು 10 ಕ್ರಯಪತ್ರವಾಗಿರುವ ವಿಚಾರ ನನ್ನ ತಂದೆ ಬದುಕಿದ್ದಾಗಲೇ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಆ ರೀತಿ ಗೊತ್ತಿದ್ದರೂ ಸಹ 2016 ರಲ್ಲಿ ಸದರಿ ಕ್ರಯಪತ್ರವಾಗಿರುವ ವಿಚಾರ ಗೊತ್ತಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 2 ನೇ ಪ್ರತಿವಾದಿಯನ್ನು ಈ ದಾವೆ ಸಲ್ಲಿಸಿದ ನಂತರ ಮಾತ್ರ ನೋಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ8 ರಲ್ಲಿ ಹೇಳಿರುವ ಹಣವನ್ನು ನನ್ನ ತಂದೆ ನಗದು, ಚೆಕ್ ಅಥವಾ ಡಿ.ಡಿ ಮೂಲಕ ನೀಡಿರುತ್ತಾರಾ ಎಂದರೆ ಸಾಕ್ಷಿದಾರರು ಬಹುಶಃ ನಗದಾಗಿ ನೀಡಿರಬಹುದು ಎನ್ನುವರು. ನಿಪಿ8 ನೋಂದಣಿಯಾಗುವ ದಿನದಂದು ನನ್ನ ತಂದೆ ನೋಂದಣಿ ಕಛೇರಿಗೆ ಮೈಸೂರಿನಿಂದ ಬಂದಿರುತ್ತಾರೆ. ಸದರಿ ದಿನ ನನ್ನ ತಂದೆ ನೋಂದಣಿ ಕಛೇರಿಗೆ ಎಷ್ಟು ಹಣ ತಂದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ದಿನ ನನ್ನ ತಂದೆ ನೋಂದಣಿ ಕಛೇರಿಗೆ ಹಣ ತಂದಿರುತ್ತಾರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ನಿಪಿ8 ರಲ್ಲಿ ಹೇಳಿರುವ ಪ್ರತಿಫಲ 12 ನೇ ಪ್ರತಿವಾದಿಯ ನಿಜವಾದ ಸಹೋದರನಿಗೆ ಸಂದಾಯವಾಗಿರುವುದಿಲ್ಲ ಎಂದರೆ ಸಾಕ್ಷಿದಾರರು ಸದರಿ ಕ್ರಯಪತ್ರವನ್ನು ಬರೆದುಕೊಟ್ಟಿರುವವರಿಗೆ ಸಂದಾಯವಾಗಿರುತ್ತದೆ ಎನ್ನುವರು. ನಿಪಿ8 ದಾಖಲೆಯನ್ನು ಬರೆದುಕೊಟ್ಟಿರುವವರು 12 ನೇ ಪ್ರತಿವಾದಿಯ ಸಹೋದರ ಸಹೋದರಿಯರಾಗಿರುವುದಿಲ್ಲ ಎಂದರೆ ಸಾಕ್ಷಿದಾರರು ಸದರಿ ಜಮೀನಿಗೆ ಸಂಬಂಧಪಟ್ಟವರು ಬರೆದುಕೊಟ್ಟಿರುತ್ತಾರೆ ಎನ್ನುವರು. ನಿಪಿ13 ರ ಪ್ರಕಾರ ನಿಪಿ8 ದಾಖಲೆಯಾದಾಗ ನನ್ನ ತಂದೆ ಶ್ರೀರಂಗಪಟ್ಟಣದ ನಿವಾಸಿಯಾಗಿದ್ದರು ಎಂದರೆ ಸರಿ. ನಾನು ಈವರೆವಿಗೂ ದಾವಆಸ್ತಿಯನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಆಸ್ತಿಯಿಂದ ಮೈಸೂರಿಗೆ 25-30 ಕಿ.ಮೀ ಅಂತರವಿರುತ್ತದೆ. ನಿಪಿ10 ರಲ್ಲಿರುವ ನಿಡಿ1 ಎ ಎಂದು ಗುರುತಿಸಿರುವ ಅಬ್ದುಲ್ಲ ರವರು ಮೈಸೂರಿನ ಖಾಯಂ ನಿವಾಸಿ ಎಂದರೆ ಇರಬಹುದು, ನನಗೆ ಗೊತ್ತಿರುವುದಿಲ್ಲ. ಸದರಿ ಅಬ್ದುಲ್ಲ ರವರು ಚಾಮಲಾಪುರ ಗ್ರಾಮದವರಲ್ಲ

ಎಂದರೆ ಸಾಕ್ಷಿದಾರರು ಮೈಸೂರಿನವರು ಇರಬಹುದು, ಆದರೆ ಚಾಮಲಾಪುರದಲ್ಲಿ ಸಿಕ್ಕಿರುತ್ತಾರೆ ಎನ್ನುವರು. 2 ನೇ ಪ್ರತಿವಾದಿಯು ಚಾಮಲಾಪುರದ ರಸ್ತೆಯಲ್ಲಿ ಸಿಕ್ಕಿರುವುದು ಸುಳ್ಳು ಎಂದರೆ ಸರಿಯಲ್ಲ. ಈ ದಾವೆಯಲ್ಲಿ ವ್ಯಾಜ್ಯ ಕಾರಣ ಸೃಷ್ಟಿಸುವ ಸಲುವಾಗಿ ನಾನು ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇತ್ತೀಚೆಗೆ ದಾವಆಸ್ತಿಯ ಮೌಲ್ಯ ಜಾಸ್ತಿಯಾಗಿರುವುದರಿಂದ 16 ವರ್ಷಗಳ ನಂತರ ಒಂದು ಕೊಟ್ಟಿ ದಾಖಲೆಯನ್ನು ತಂದು ನ್ಯಾಯಾಲಯದಲ್ಲಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ8 ದಾಖಲೆಯು ಕೊಟ್ಟಿ ದಾಖಲೆಯಾದ್ದರಿಂದ ನನ್ನ ತಂದೆ ಜೀವಂತವಿರುವವರೆಗೆ ಯಾವುದೇ ಖಾತೆಯನ್ನು ಮಾಡಿಸಿಕೊಂಡಿರುವುದಿಲ್ಲ ಮತ್ತು ಯಾವ ದಾವೆ ಹೂಡಿರುವುದಿಲ್ಲ ಎಂದರೆ ಸಾಕ್ಷಿದಾರರು ಖಾತೆ ಮಾಡಿಸಿಕೊಳ್ಳಲು ಪ್ರಯತ್ನಿಸಿರುತ್ತಾರೆ, ದಾಖಲೆಯಲ್ಲಿ ಆ ಬಗ್ಗೆ ನಮೂದು ಇರುತ್ತದೆ ಎನ್ನುವರು. ನಿಪಿ9 ಮತ್ತು 10 ರಂತೆ ಕ್ರಯಪತ್ರ ಬರೆದುಕೊಡುವ ಹಕ್ಕು 1 ರಿಂದ 16 ಮತ್ತು 18 ನೇ ಪ್ರತಿವಾದಿಯರಿಗೆ ಮಾತ್ರ ಇರುತ್ತದೆ ಎಂದರೆ ಸಾಕ್ಷಿದಾರರು ದಾವಆಸ್ತಿಗೆ ಹಕ್ಕು ಇರುವವರು ನನ್ನ ತಂದೆಗೆ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎನ್ನುವರು. ನಿಪಿ8 ಕ್ರಯಪತ್ರವನ್ನು 1 ರಿಂದ 16 ಮತ್ತು 18 ನೇ ಪ್ರತಿವಾದಿಯರು ನನ್ನ ತಂದೆಗೆ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ8 ದಾಖಲೆಯು ಕೊಟ್ಟಿ ದಾಖಲೆಯಾದ್ದರಿಂದ ನಾನು ಈ ದಾವೆಯಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 19 ಮತ್ತು 20 ನೇ ಪ್ರತಿವಾದಿ ಪರ ಶ್ರೀ ಕೆ.ಆರ್.ಎಸ್ ವಕೀಲರಿಂದಃ**

ನನ್ನ ತಂದೆ ನಿಪಿ8 ರಂತೆ ಕ್ರಯಪತ್ರ ಮಾಡಿಕೊಂಡಿದ್ದಾರೆ ಎಂದು ಹೇಳುವ ಸಮಯದಲ್ಲಿ ನೋಂದಣಿ ಕಛೇರಿಗೆ ಯಾರೆಲ್ಲ ಹೋಗಿರುತ್ತಾರೆ ಎಂದು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಸದರಿ ಸಮಯದಲ್ಲಿ ನಾನು ಹಾಜರಿರಲಿಲ್ಲ. ಸದರಿ ದಿನ ನನ್ನ ತಾಯಿ ನೋಂದಣಿ ಕಛೇರಿಗೆ ಹೋಗಿರುವುದಿಲ್ಲ. ನಿಪಿ8 ನೋಂದಣಿಯಾಗಿದೆ ಎಂದು ಹೇಳುವ ದಿನ ನಾನು ಕಾಲೇಜಿಗೆ ಹೋಗಿದ್ದೆ. 2000 ರ ಪೂರ್ವದಲ್ಲಿ ನನ್ನ ತಂದೆಗೆ ಯಾವುದೇ ಜಮೀನು ಇರಲಿಲ್ಲ. ನಿಪಿ8 ದಾಖಲೆಯನ್ನು ಬರೆದುಕೊಟ್ಟಿರುವವರು ನನ್ನ ತಂದೆಗೆ ಮೊದಲೇ ಪರಿಚಯಸ್ಥರಾ ಎಂದು ನನಗೆ ಗೊತ್ತಿರುವುದಿಲ್ಲ. ಯಾರ ಕಡೆಯಿಂದ ಪರಿಚಯವಾಗಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಬಿಲಾಲ್ ರವರ ಗಂಡ ಅಬ್ದುಲ್ಲ ಎಂದು ತೋರಿಸುವ ಬಗ್ಗೆ ಕ್ರಯಪತ್ರ ಹೊರತುಪಡಿಸಿ ಬೇರೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಿಪಿ8 ಕ್ರಯಪತ್ರದ ವಿಚಾರ ನನ್ನ ತಂದೆಯಿಂದ ನನಗೆ ಗೊತ್ತಾಗಿರುತ್ತದೆ. ನಿಪಿ8 ರಂತೆ ಕ್ರಯಪತ್ರವನ್ನು ಸೃಷ್ಟಿ ಮಾಡಿಕೊಂಡು ನನಗೆ ಯಾವುದೇ ವಿಚಾರದ ಬಗ್ಗೆ ಮಾಹಿತಿ ಇರದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.